ಹಿರೇಕೆರೂರು ತಾಲ್ಲೂಕು ಕೋಡಗ್ರಾಮನ ದೊಡ್ಡಕೆರೆ ದುರಸ್ತಿ

2057 - ಶ್ರೀ ಯು.ಬಿ. ಬಣಕಾರ (ಹಿರೇಕೆರೂರ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಿರೇಕೆರೂರ್ ತಾಲ್ಲೂಕು ಕೋಡಗ್ರಾಮದ ಪರಿಶಿಷ್ಟ ಜಾತಿಯವರ ಬಡಾವಣೆಯಲ್ಲಿ ಕೋಡ ದೊಡ್ಡ ಕೆರೆಗೆ ಹೋಗುವ ಕಾಲುವೆಯ ಮೇಲಿನ ದಾರಿ ಪೂರ್ತಿ ಬೀಳುವ ಸ್ಥಿತಿಯನ್ನು ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಇದನ್ನು ಯಾವಾಗ ದುರಸ್ತಿ ಮಾಡಲಾಗುವುದು?*

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಸಚಿವರು) :

ಅ) ಬಂದಿದೆ.

ಆ) ಹಿರೇಕೆರೂರ್ ಲೋಕೋಪಯೋಗಿ ಉಪ ವಿಭಾಗವನ್ನು ಕೂಡಲೇ ದುರಸ್ತಿ ಕಾರ್ಯ ಕೈಗೊಳ್ಳುವಂತೆ ಕೋರಲಾಗಿದೆ.

ವಕ್ಫ್ ಮಂಡಳಿಯ ಪ್ರಯೋಜನಗಳು

2058 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ವಕ್ಫ್ ಮಂಡಳಿಯಿಂದ ಬರುವ ಪ್ರಯೋಜನಗಳೇನು?*

2) *1996-97ನೇ ಸಾಲಿನಲ್ಲಿ ವಕ್ಫ್ ಮಂಡಳಿಗೆ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು ಯಾವ ಯಾವ ದಿನಾಂಕಗಳಲ್ಲಿ ಬಿಡುಗಡೆ ಮಾಡಿದೆ?*

3) *1996-97ನೇ ಸಾಲಿನಲ್ಲಿ ವಕ್ಫ್ ಮಂಡಳಿಯಿಂದ ಆದ ಖರ್ಚು ಎಷ್ಟು, ಯಾವುದಕ್ಕೆ ಖರ್ಚು ಮಾಡಲಾಗಿದೆ (ವಿವರ ನೀಡುವುದು)?*

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

1) ವಕ್ಫ್ ಮಂಡಳಿಯಿಂದ ಬರುವ ಪ್ರಯೋಜನಗಳು ಹೀಗಿವೆ :

ಅ) ವಕ್ಫ್ ಸಂಸ್ಥೆಗಳ ದುರಸ್ತಿ, ಜೀರ್ಣೋದ್ಧಾರ : ನಿರ್ಮಾಣ ಇವುಗಳಿಗೆ ಸಹಾಯಾನುದಾನ ನೀಡಲಾಗುತ್ತಿದೆ.

ಆ) ಬಡ ಶಾಲಾ ಮಕ್ಕಳಿಗೆ ಹಾಗೂ ವೃತ್ತಿಪರ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡಲಾಗುತ್ತಿದೆ.